# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ.ಕಾ.ನಿ.ಅ/ಶ್ರೀರಾಮ/ಪಿಆರ್/ /22-23

ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು,
ಪ್ರಕಾಶನಗರ, ವಾರ್ಡ್ ಮಟ್ಟದ ಸಮಿತಿ
ಪ್ರಕಾಶನಗರ, ವಾರ್ಡ್ ಸಂ.140
ಬೆಂಗಳೂರು, ದಿನಾಂಕ: 17/09/2022

**ದಿನಾಂಕ: 17/09/2022 ರಂದು ಬೆಳ್ಳಗ್ಗೆ 11.00 ಗಂಟೆಗೆ ನಡೆದ ಸಭಾ ನಡವಳಿಗಳು:**

**ಸಭೆಯಲ್ಲಿ ಹಾಜರಿದ್ದವರು.**

ಸಭೆಗೆ ಹಾಜರಿದ್ದ ವಾರ್ಡ್ ಕಮಿಟಿ ಅಧಿಕಾರಿ/ಸದಸ್ಯರು :

1. ಶ್ರೀ ಕೆ.ಪಿ ಯೋಗೇಸ್ ಸ.ಕಾ.ನಿ.ಅ ಹಾಗೂ ನೋಡೆಲ್ ಅಧಿಕಾರಿ
2. ಶ್ರೀ ಹಿತ್ಯೈಶಿನಿ.ಎಸ್ ಸಹಾಯಕ ಅಭಿಯಂತರರು
3. ಶ್ರೀ ರವಣಯ್ಯ , ಕಿರಿಯ ಆರೋಗ್ಯ ಪರಿವೀಕ್ಷಕರು,
4. ಶ್ರೀ ಎನ್.ಎಂ. ತೋಪೆಗೌಡ್ರು ಕಂದಾಯ ಪರಿವೀಕ್ಷಕರು
5. ಶ್ರೀ ಎಲ್. ವಸಂತಕುಮಾರ್ ಸದಸ್ಯರು
6. ಗೀತಾ ಎನ್ ರಾಜಾಜಿನಗರ ಪೋಲೀಸ್ ಸ್ಟೇಷನ್,
7. ಶ್ರೀ ಜಿ ದಿನೇಶ್ ಕುಮಾರ್ ಸದಸ್ಯರು / ಸಾರ್ವಜನಿಕರು
8. ಶ್ರೀ ನಾರಾಯಣ ಸ್ವಾಮಿ ಸದಸ್ಯರು /ಸಾರ್ವಜನಿಕರು
9. ಶ್ರೀ ರಾಜಗಿರಿ ಪ್ರದೀಪ್ ಸದಸ್ಯರು /ಸಾರ್ವಜನಿಕರು
10. ಶ್ರೀ ಕೆ.ಎನ್ ಶ್ರೀನಿವಾಸ್ ಸದಸ್ಯರು /ಸಾರ್ವಜನಿಕರು

ಸಹಾಯಕ ಅಭಿಯಂತರರು ಕಾರ್ಯದರ್ಶಿ ಮತ್ತು ಸಂಚಾಲಕರು, ಸ.ಅ, ವಾರ್ಡ್ ಸಂ.140 (ಹಳೆ ನಂ.98) ವಾರ್ಡ್ ಸಮಿತಿಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲು ತಿಳಿಸಿದರು. ಸಭೆಯಲ್ಲಿ ಹಾಜರಿದ ಸದಸ್ಯರು ಹಾಗು ಪಾಲಿಕೆಯ ಅಧಿಕಾರಿಗಳು ತಮ್ಮ ಪರಿಚಯ ನೀಡಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಗಾಯಿತ್ರಿ ಪಾರ್ಕ್‌ನಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೊಳ್ಳೆಗಳು ಜಾಸ್ತಿಯಾಗಿವೆ ಎಂದು ಸದಸ್ಯರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಆರೋಗ್ಯ ಇಲಾಖೆಗೆ ತಕ್ಷಣವೇ ಸೊಳ್ಳೆ ನಿಯಂತ್ರಣ ಔಷದಿಯನ್ನು ಸಿಂಪಡಿಸಲು ದೂರವಾಣಿ ಮುಖಾಂತರ ನೋಡಲ್ ಅಧಿಕಾರಿಗಳು ನಿರ್ದೇಶನ ನೀಡಿದರು.

2. ವಾರ್ಡ್ ವ್ಯಾಪ್ತಿಗೆ ಬರುವ ಎಲ್ಲಾ ಕಡೆಗಳಲ್ಲಿ ಸಿಸಿಟಿವಿ ಕ್ಯಾಮಾರಗಳು ರಿಪೇರಿ ಕಾರ್ಯದ ವಿಷಯವಾಗಿ ಸಾರ್ವಜನಿಕರಿಂದ ಅನೇಕ ದೂರುಗಳು ಬರುತ್ತಿರುವುದರಿಂದ ಸದರಿ ಕ್ಯಾಮಾರಗಳನ್ನು ದುರಸ್ಥಿಪಡಿಸಲು ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.

3. ವಾರ್ಡ್ ವ್ಯಾಪ್ತಿಗೆ ಬರುವ ವಾರ್ಡ್ ಮಟ್ಟದ ನಡೆಯುತ್ತಿರುವ ಪ್ರಸ್ತುತ ಕಾಮಗಾರಿಗಳಿಗೆ ಗುತ್ತಿಗೆದಾರರ ಮತ್ತು ಕಾಮಗಾರಿಗಳ ವಿವರಗಳ ತಿಳಿಸುವ ನಾಮಫಲಕವನ್ನು ಅಳವಡಿಸಲು ಸಾರ್ವಜನಿಕರು ಸಭೆಯಲ್ಲಿ ಚರ್ಚಿಸಿದಾಗ ನೋಡಲ್ ಅಧಿಕಾರಿಗಳು ನಿರ್ದೇಶನ ನೀಡಿದರು.

4. 3ನೇಅಡ್ಡರಸ್ತೆ ಪ್ರಕಾಶನಗರದ ನೀರಿನ ಸೋರಿಕೆ ಮತ್ತು ಕಲುಷಿತವಾಗಿರುವುದಾಗಿ ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
5. ಸ್ವತ್ತಿನ ಸಂಖ್ಯೆ. 956. 8ನೇ ಮುಖ್ಯರಸ್ತೆರವರ ಸ್ವತ್ತಿನ ಪಕ್ಕದಲ್ಲಿ ಮ್ಯಾನ್ ಹೋಲ್ ತುಂಬಿಕೊಂಡು ಸತತವಾಗಿ ಬ್ಲಾಕ್ ಆಗುತ್ತಿರುವ ಬಗ್ಗೆ ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸೂಕ್ತ ಕ್ರಮುವಹಿಸಲು ನಿರ್ದೇಶನ ನೀಡಿದರು.
6. ವಾರ್ಡ್ ವ್ಯಾಪ್ತಿಗೆ ಬರುವ ಬೀದಿ ದೀಪಗಳು ಸರಿಯಾಗಿ ಕಾರ್ಯ ನಿರ್ವಹಿಸದೇ ಇರುವ ಬಗ್ಗೆ ಸದಸ್ಯರು ಚರ್ಚೆ ಮಾಡಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಯುವರಿಗೆ ಪಾರ್ಕ್‌ನಲ್ಲಿರುವ ಬೀದಿ ದೀಪಗಳನ್ನು ದುರಸ್ತಿಗೊಳಿಸಲು ನಿರ್ದೇಶನ ನೀಡಿದರು.
7. ವಾರ್ಡ್ ವ್ಯಾಪ್ತಿಯಲ್ಲಿ Jio cable ರವರ ರಸ್ತೆಗಳಲ್ಲಿ ಗುಂಡಿ ತೆಗೆದಿದ್ದು, ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದೆ ಎಂದು ಸದಸ್ಯರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಾರ್ವಜನಿಕರಿಗೆ ತೊಂದರೆಯಾಗದಂತೆ ಗುಂಡಿಗಳನ್ನು ಬೇಗನೆ ದುರಸ್ಥಿಗೊಳಿಸಲು ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ನೀಡಿದರು.

ಮುಂದುವರೆದಂತೆ, ನೋಡಲ್ ಅಧಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಇಂಜಿನಿಯರ್ ಆದ ಕುಮಾರಿ॥ ಹಿತ್ತೈಷಿಣಿ.ಎಸ್ ಸಹಾಯಕ ಅಭಿಯಂತರರು ರವರು ಎಲ್ಲಾರಿಗೂ ವಂದಿಸಿ ಸಭೆ ಮುಕ್ತಾಯಗೊಳಿಸಿದರು.
**ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ,**

AE-140
ಕಾರ್ಯದರ್ಶಿ
ವಾರ್ಡ್ ಸಂ.140

ನೋಡಲ್ ಅಧಿಕಾರಿ
ವಾರ್ಡ್ ಮಟ್ಟದ ಸಮಿತಿ
ವಾರ್ಡ್ ಸಂ.140, ಪ್ರಕಾಶನಗರ